## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕಚೇರಿಯಲ್ಲಿ ಒಂದು ಶಾಶ್ವತ ಇಂಜನಿಯರಿಂಗ್ ವಿಭಾಗವನ್ನು ಸ್ಥಾಪಿಸುವ ಬಗ್ಗೆ.

ಓದಲಾಗಿದೆ:- 1) ಆದೇಶ ಸಂ:ಸಕಇ 532 ಎಸ್ಇ ಡಬ್ಲ್ಯೂ 96, ದಿ:06-10-1999.
2)ಪತ್ರಸಂ:ಕವಶಿಸಸ/ಸಿಆರ್(ಆಡಳಿತ)28/2009-10,ದಿ06-08-2009

***

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ನಿರ್ವಹಣೆಗೆ ಮತ್ತು ಕಟ್ಟಡಗಳ ನಿರ್ಮಾಣ ಮಾಡಲು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವನ್ನು ಸ್ಥಾಪಿಸಿ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(2) ರ ಪತ್ರದಲ್ಲಿ ಕಾರ್ಯ ನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು ಇವರು ಕಟ್ಟಡಗಳನ್ನು ನಿರ್ಮಾಣ ಮಾಡುವ ಸಲುವಾಗಿ ಸಂಘವು ತಾಂತ್ರಿಕ ಸಮಾಲೋಚಕರುಗಳನ್ನು (ಪಿಎಂಸಿ) ನೇಮಕ ಮಾಡಿಕೊಂಡಿದೆ. ಕಟ್ಟಡಗಳ ವಿನ್ಯಾಸ, ಅಂದಾಜು ಪಟ್ಟಿ ತಯಾರಿಕೆ, ಕಟ್ಟಡ ಕೆಲಸದ ಪರಿವೀಕ್ಷಣೆ ಮಾಡುವುದು, ಕಟ್ಟಡಗಳ ಗುಣಮಟ್ಟವನ್ನು ಕಾಯ್ದು ಕೊಳ್ಳುವುದು ಇತ್ಯಾದಿ ಕೆಲಸಗಳನ್ನು ಈ ತಾಂತ್ರಿಕ ಕೆಲಸಗಾರರ ಮೂಲಕ ನಿರ್ವಹಿಸಲಾಗುತ್ತಿದೆ. ಸಂಘವು ನಿರ್ವಹಿಸುತ್ತಿರುವ ಎಲ್ಲಾ ವಸತಿ ಶಾಲೆಗಳ ಕಟ್ಟಡ ಕಾಮಗಾರಿಗಳಿಗೆ ಗುತ್ತಿಗೆ ಆಧಾರದ ಮೇಲೆ ಇಬ್ಬರು ಇಂಜನಿಯರುಗಳು ಹಾಗೂ ಬೇರೆ ಇಲಾಖೆಗಳಿಂದ ಇಬ್ಬರು ಸಹಾಯ ಅಬಿಯಂತರರುಗಳನ್ನು ನೇಮಕ ಮಾಡಿಕೊಳ್ಳಲಾಗಿದೆ. ದಿನಾಂಕ 07-08-2009 ರಂದು ನಡೆದ ಕರ್ನಾಟಕ ವಿಧಾನ ಮಂಡಲದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಮಿತಿ ಸಭೆಯಲ್ಲಿ ಸಂಘದಲ್ಲಿ ಅನೇಕ ಕಟ್ಟಡ ನಿರ್ಮಾಣ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಕೆಲಸಗಳು ನಡೆಯುತ್ತಿರುವುದರಿಂದ ಈಗ ಲಭ್ಯವಿರುವ ತಾಂತ್ರಿಕ ಸಲಹೆಗಾರರು ಮತ್ತು ಗುತ್ತಿಗೆ ಇಂಜನೀಯರುಗಳು ಸಾಕಾಗುತ್ತಿಲ್ಲ. ಅಲ್ಲದೇ ಇವರಿಗೆ ಯಾವುದೇ ತೆರನಾದ ನಿಯಂತ್ರಣ ಇಲ್ಲದೇ ಇರುವುದರಿಂದ ಕಟ್ಟಡ ಗುಣಮಟ್ಟದ ಬಗ್ಗೆ ಹೆಚ್ಚಿನ ಭರವಸೆ ಇಟ್ಟುಕೊಳ್ಳಲು ಸಾಧ್ಯವಿರುವುದಿಲ್ಲ. ಪ್ರಯುಕ್ತ ತಕ್ಷಣವೇ ಒಂದು ಶಾಶ್ವತವಾದ ಇಂಜನೀಯರಿಂಗ್ ವಿಭಾಗವನ್ನು ತೆರೆಯಬೇಕೆಂದು ಅಭಿಪ್ರಾಯಿಸಲಾಗಿದೆ. ಈ ದಿಸೆಯಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘಕ್ಕೆ ಒಂದು ಇಂಜನಿಯರ್ ಗಳ ಸಮೂಹ ಅಗತ್ಯವಿರುತ್ತದೆ. ಈಗ ಸಂಘದ ವತಿಯಿಂದ 108 ವಸತಿ ಶಾಲೆ ಮತ್ತು 112 ವಿದ್ಯಾರ್ಥಿನಿಲಯಗಳ ಕಾಮಗಾರಿ ಕೆಲಸಗಳು ನಡೆಯುತ್ತಿವೆ. ಅಲ್ಲದೇ, ಇನ್ನೂ 346 ವಸತಿ ಶಾಲೆಗಳ ಕಟ್ಟಡಗಳನ್ನು ನಿರ್ಮಾಣ ಮಾಡಬೇಕಾಗಿದ್ದು, ತಾಂತ್ರಿಕ ಸಿಬ್ಬಂದಿಯನ್ನು ಸೃಜಿಸಿ ಇವುಗಳನ್ನು ಭರ್ತಿ ಮಾಡಲು ಅನುಮೋದನೆ ಹಾಗೂ ಹುದ್ದೆಗಳನ್ನು ಮಂಜೂರು ಮಾಡಿ ಸಂಘದ ವತಿಯಿಂದ ತುಂಬಿಕೊಳ್ಳಲು ಅನುಮತಿ ನೀಡುವಂತೆ ಕೋರಿರುತ್ತಾರೆ.

ಅದರಂತೆ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

### ಸರ್ಕಾರಿ ಆದೇಶ ಸಂಖ್ಯೆ:ಸಕಇ 109 ಮೊದೇಶಾ 2009, ಬೆಂಗಳೂರು ದಿನಾಂಕ: 14-07-2010.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕಚೇರಿಯಲ್ಲಿ ಒಂದು ಶಾಶ್ವತ ಇಂಜನಿಯರಿಂಗ್ ವಿಭಾಗವನ್ನು ಒಂದು ವರ್ಷದ ಅವಧಿ ಆಧಾರದನ್ವಯ ಸ್ಥಾಪಿಸಲು ಹಾಗೂ ಈ ಕೆಳಕಂಡಂತೆ ತಾಂತ್ರಿಕ ಸಿಬ್ಬಂದಿಗಳನ್ನು ಭರ್ತಿ ಮಾಡಲು ಅನುಮೋದನೆಯನ್ನು ನೀಡಿ ಆದೇಶಿಸಲಾಗಿದೆ.

| ಕ್ರಸಂ | ಪದನಾಮ | ಹುದ್ದೆಗಳ ಸಂಖ್ಯೆ | ವಿವರ |
|---|---|---|---|
| 1. | ಅಧೀಕ್ಷಕ ಅಭಿಯಂತರರು | 1 | ಲೋಕೋಪಯೋಗಿ ಇಲಾಖೆ ಅಥವಾ ಇತರೆ ಇಲಾಖೆಯಿಂದ ನಿಯೋಜನೆ ಮೇಲೆ |
| 2. | ಕಾರ್ಯಪಾಲಕ ಅಭಿಯಂತರರು | 1 | ಲೋಕೋಪಯೋಗಿ ಇಲಾಖೆ ಅಥವಾ ಇತರೆ ಇಲಾಖೆಯಿಂದ ನಿಯೋಜನೆ ಮೇಲೆ |
| 3. | ಸಹಾಯಕ ಕಾರ್ಯಪಾಲಕ ಅಭಿಯಂತರರು | 4 | ಲೋಕೋಪಯೋಗಿ ಇಲಾಖೆ ಅಥವಾ ಇತರೆ ಇಲಾಖೆಯಿಂದ ನಿಯೋಜನೆ ಮೇಲೆ |
| 4. | ಸಹಾಯಕ ಅಭಿಯಂತರರು | 2 | ಲೋಕೋಪಯೋಗಿ ಇಲಾಖೆ ಅಥವಾ ಇತರೆ ಇಲಾಖೆ/ಹೊರಗುತ್ತಿಗೆಯಿಂದ ನಿಯೋಜನೆ ಮೇಲೆ |
| 5. | ಕಿರಿಯ ಅಭಿಯಂತರರು | 2 | ಲೋಕೋಪಯೋಗಿ ಇಲಾಖೆ ಅಥವಾ ಇತರೆ ಇಲಾಖೆ/ಹೊರಗುತ್ತಿಗೆಯಿಂದ ನಿಯೋಜನೆ ಮೇಲೆ |
| 6 | ಡ್ರಾಫ್ಟ್‌ಮೆನ್ | 2 | ಲೋಕೋಪಯೋಗಿ ಇಲಾಖೆ ಅಥವಾ ಇತರೆ ಇಲಾಖೆ/ಹೊರಗುತ್ತಿಗೆಯಿಂದ ನಿಯೋಜನೆ ಮೇಲೆ |

..2..

50

ಇದಕ್ಕೆ ತಗಲುವ ವೆಚ್ಚವನ್ನು ಸಂಘದ ನಿರ್ವಹಣಾ ವೆಚ್ಚ ಲೆಕ್ಕಶೀರ್ಷಿಕೆ 2225-01-277-0-53 ರಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂ: ಎಫ್‌ಡಿ 319 ವೆಚ್ಚ-3/10. ದಿನಾಂಕ 11-06-2010 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಂ.ಎಂ.ಬಾಟೆ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಮಾಜ ಕಲ್ಯಾಣ ಇಲಾಖೆ.

ಗೆ,

1.ಮಹಾಲೇಖಪಾಲರು,(ಎ ಮತ್ತು ಇ)(ಲೆಕ್ಕ ಪರಿಶೋಧನೆ-1) (ಲೆಕ್ಕಪರಿಶೋಧನೆ-2) ಕರ್ನಾಟಕ, ಬೆಂಗಳೂರು.
2.ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ,ಬೆಂಗಳೂರು
3.ರಾಜ್ಯ ಖಜಾನಾಧಿಕಾರಿ,ರಾಜ್ಯ ಹುಜೂರ್ ಖಜಾನೆ,ಬೆಂಗಳೂರು.
4,ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ ವೆಚ್ಚ-3,ವಿಧಾನ ಸೌಧ,ಬೆಂಗಳೂರು
5.ಉಪನಿರ್ದೇಶಕರು, ಖನಿಜ ಭವನ, ರೇಸ್ ಕೋರ್ಸು ರಸ್ತೆ,ಬೆಂಗಳೂರು.
6.ಸರ್ಕಾರದ ಪ್ರದಾನ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ,ಸ.ಕ.ಇ.ವಿಕಾಸ ಸೌಧ,ಬೆಂಗಳೂರು
7.ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.